

ರಾಮಯ್ಯ ಹೆಗೆಡೇರ ಅಂಗಡಿಯಿಂದ ತುಪ್ಪದಲ್ಲೇ ಮಾಡಿದ ನೂರು ಲಾಡು ಕಟ್ಟಿಸಿಕೊಂಡು ಆದಷ್ಟು ಬೇಗ ಬಾ'. ಇತ್ತ ಮಾಸ್ತರರಿಗೂ ಹೇಳಿದರು, 'ಎಲ್ಲ ತಯಾರಾಗಿ, ಮಕ್ಕಳನ್ನೂ ಹೊರಡಿಸಿ, ಊರತುಂಬ ಮೆರವಣಿಗೆ ಮಾಡಿ ಸಿಹಿ ಹಂಚಿಬರುವ. ಅವನ ಎತ್ತಿನಗಾಡಿ ಇವತ್ತು ನಮಗೆ ಬೇಕು ಅಂತ, ಆ ಜಟ್ಟಯ್ಯ ನಾಯ್ಕಗೆ ಹೇಳಿಕಳಿಸಿ. ನಾನು ಹೇಳಿದ್ದೇನೆ ಅಂದರೆ ಅವನು ಇಲ್ಲ ಅನ್ನೋದಿಲ್ಲ.

ಅಷ್ಟು ಹೊತ್ತಿಗಾಗಲೆ ಮಂಜ ಸೈಕಲ್ ಕ್ಯಾರಿಯರ್ ಮೇಲೆ ರಟ್ಟಿನ ಪೆಟ್ಟಿಗೆಯಲ್ಲಿ ಲಾಡು ತುಂಬಿಸಿಕೊಂಡು ಬಂದು, ಅದನ್ನು ನೇರವಾಗಿ ಹೆಡ್ ಮಾಸ್ತರ್ ಕೋಣೆಗೆ ಒಯ್ದಿಟ್ಟ. ಎಲ್ಲ ಸರಿಯಿದೆಯೋ ಎಂದು ನೋಡುವ ನೆಪದಲ್ಲಿ ಮಾಸ್ತರರೊಬ್ಬರು ಒಂದು ಲಾಡು ತೆಗೆದು, ನಾಲ್ಕು ಜನರಿಗೆ ಚೂರು ಮಾಡಿಕೊಟ್ಟು ತಮ್ಮ ಸಂತಸವನ್ನು ಹಂಚಿಕೊಂಡಿದ್ದೂ ಆಯ್ತು. ಬೇಡ್ಕಣಿಯಿಂದ ಹತ್ತು ಮೈಲು ದೂರದ ಇಟಗಿಯ ಅಖಂಡ ಸಾಹುಕಾರ ಪುರುಷೋತ್ತಮ ಹೆಗಡೆಯವರ ಮಗ ಶಿವರಾಮ ಮುಂಬೈಯಲ್ಲಿರುವ ತಮ್ಮ ಚಿಕ್ಕಮ್ಮನ ಮನೆಯಲ್ಲಿ ಉಚ್ಚ ಶಿಕ್ಷಣ ಪಡೆಯುತ್ತಿದ್ದ. ಊರಿಗೆ ಬಂದವನು ಕಾರಿನಲ್ಲಿ ತನ್ನ ಗೆಳೆಯನೊಂದಿಗೆ ಸಿದ್ದಾಪುರದ ಕಡೆಗೆ ಹೊರಟಿದ್ದವನು ರಸ್ತೆಬದಿಯಲ್ಲಿಯ ಈ ಗೌಜು–ಗದ್ದಲ ನೋಡಿ ಗೆಳೆಯನಿಗೆ ಕಾರು ನಿಲ್ಲಿಸುವಂತೆ ಹೇಳಿದ. 'ಅಲ್ಲಿಂಗೆಂತ ಹೋಪುದಾ, ಗ್ಯಾದರಿಂಗ್ ತಯಾರಿ ಇದ್ದಿಕ್ಕು...' ಎಂದು ಅವನು ಹೇಳಿದರೂ ಕೇಳದೆ, ಕುತೂಹಲಕ್ಕಾಗಿ ಅಲ್ಲಿಗೆ ಬಂದು ಏನು ವಿಶೇಷ? ಎಂದು ಕೇಳಿದ. ಕೇಳಿದ್ದೇ ತಡ ತಿಮ್ಮಯ್ಯ ಸಾಹುಕಾರರು ಶಿವರಾಮ ಹೆಗಡೆಗೆ ಹೆಡ್ ಮಾಸ್ತರ್ ಕೋಣೆಗೆ ಬರಮಾಡಿಕೊಂಡು ಕುಳಿತುಕೊಳ್ಳುವುದಕ್ಕೆ ಹೇಳಿ, ವಿಷಯ ತಿಳಿಸಿದರು.

ಒಬ್ಬ ಮಾಸ್ತರರು ಲಾಡು ತರಲು ಹೋದರು. ಇನ್ನೊಬ್ಬ ಮಾಸ್ತರರು ಸರಕಾರದಿಂದ ಬಂದ ಪತ್ರ ಎತ್ತಿ ತಂದು ಶಿವರಾಮ ಹೆಗಡೆಯ ಮುಂದಿಟ್ಟರು. ಶಿವರಾಮ ಆ ಪತ್ರವನ್ನು ಬುಡದಿಂದ ತುದಿವರೆಗೆ ಓದಿ, ದಿಗ್ಭ್ರಾಂತನಾಗಿ ತಲೆಕೆಳಗೆ ಹಾಕಿದ. ಅವನೇ ಕೇಂದ್ರಬಿಂದು ಆಗಿದ್ದರಿಂದ ಎಲ್ಲರ ದೃಷ್ಟಿ ಅವನ ಕಡೆಗೇ ಇತ್ತು. ಒಮ್ಮೆ ತಲೆ ಎತ್ತಿ ಎಲ್ಲರನ್ನು ನೋಡಿ ಹೇಳಿದ, 'ರಿಕ್ವೆಸ್ಟ್ ಫಾರ್ ಓಪನಿಂಗ್ ಎ ಹೈಸ್ಕೂಲ್ ನಾಟ್ ಪರ್ಮಿಟೆಡ್ ಎಂದು ಬರೆದಿದ್ದಾರೆ. ಅಂದರೆ, ಸದ್ಯ ಶಾಲೆ ಮಂಜೂರು ಮಾಡಲು ಸಾಧ್ಯವಿಲ್ಲ...'. ಎಲ್ಲರೂ ಒಮ್ಮೆಲೆ ಕುಸಿದುಹೋದಂತಾದರು. ಮತ್ತೆ ವಿಸ್ತಾರವಾಗಿ ಅವನು ಹೇಳಿದ, 'ಅದಕ್ಕವರು ಕಾರಣ ಕೊಟ್ಟಿದ್ದಾರೆ. ಎರಡು ಯುದ್ಧಗಳನ್ನು ಎದುರಿಸಿದ್ದರಿಂದ ದೇಶದ ಆರ್ಥಿಕ ಸ್ಥಿತಿ ತೀರಾ ಹದಗೆಟ್ಟಿದೆ. ಕೇಂದ್ರ ಸರಕಾರದ ಬೊಕ್ಕಸ ಬರಿದಾಗುವ ಸ್ಥಿತಿಗೆ ಬಂದಿದೆ. ಹಾಗಾಗಿ ಎಲ್ಲ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಕೇಂದ್ರಕ್ಕೆ ಸಹಾಯ ಮಾಡುವ ಹೊಣೆಯೂ ನಮ್ಮ ರಾಜ್ಯ ಸರಕಾರಗಳ ಮೇಲಿದೆ. ನೀವು ನಿಮ್ಮ ಇಂಫ್ರಾಸ್ಟ್ರಕ್ಚರ್ ಅಂದರೆ ಮೂಲ ಸೌಕರ್ಯ ಅಂದರೆ, ಕಟ್ಟಡ ಎಲ್ಲಾ ಕಟ್ಟಿ ಅಂದರೆ ಹೊರಗಿನಿಂದ ಮಾಡಬಹುದಾದಂತಹ ಕೆಲಸ ಪೂರೈಸಿ ಆಮೇಲೆ ನಿಧಾನವಾಗಿ ಪುನಃ ಅರ್ಜಿ ಸಲ್ಲಿಸಿ ಎಂದು ಬರೆದಿದ್ದಾರೆ'.

ಇಷ್ಟು ಹೇಳಿ ಅವರಿಗೆಲ್ಲ ವಂದಿಸಿ ಶಿವರಾಮ ಎದ್ದು ನಿಲ್ಲುತ್ತಿದ್ದಂತೆ ಕಾರಲ್ಲಿ ಕುಳಿತು ಸುಸ್ತಾದ ಅವನ ಗೆಳೆಯನೂ ಅಲ್ಲಿಗೆ ಬಂದು ಬಾಗಿಲ ಬಳಿ ನಿಂತಿದ್ದ. 'ಹಾಂ, ಹೊರಡ್ವನಾ?' ಎಂದು ಗೆಳೆಯನನ್ನು ಎಳೆದುಕೊಂಡು ಕಾರಿನ ಕಡೆಗೆ ಹೋಗುತ್ತಿದ್ದಂತೆ ಗೆಳೆಯ 'ಕಾಯಿಸಿಪ್ಪೆ ಅಂದ್ರೆ ಗೇರಸೊಪ್ಪ ಅಂದಿದ್ರಡಾ...' ಎನ್ನುತ್ತ ಜೋರಾಗಿ ನಕ್ಕ. ಶಾಲೆಯತ್ತ ಹಿಂದಿರುಗಿ ನೋಡುತ್ತಿದ್ದಂತೆ ಅಲ್ಲಿರುವವರ ಅಸಹಾಯಕ ಸ್ಥಿತಿ ನೋಡಿ ಶಿವರಾಮನಿಗೆ ಗೆಳೆಯನ ನಗುವಿಗೆ ದನಿಗೂಡಿಸುವ ಮನಸ್ಸಾಗಲಿಲ್ಲ.

ಅಷ್ಟರಲ್ಲಿ ತಿಮ್ಮಯ್ಯ ಸಾಹುಕಾರರು ಏರುದನಿಯಲ್ಲಿ, 'ಹೆಗಡೇರೆ, ನಿಂತಕಳಿ' ಎಂದು ಒಬ್ಬ ಮಾಸ್ತರ ಹತ್ತಿರ ನಾಲ್ಕು ಲಾಡು ಕಟ್ಟಿಸಿಕೊಂಡು ಕಾರಿನ ಬಳಿಗೆ ಹೋಗಿ, 'ಹಾಗಾದರೆ ಮತ್ತೆ ಅರ್ಜಿ ಹಾಕಬಹುದು, ಅಲ್ವಾ?' ಎಂದು ಕೇಳಿದರು. 'ಹೂಂ' ಎಂಬಂತೆ ಶಿವರಾಮ ತಲೆಯಾಡಿಸಿ, ಬರುವುದಾಗಿ ಹೇಳಿ ಕೈಮುಗಿದ.

ಸಾಹುಕಾರರು ಮರಳಿ ಹೆಡ್ ಮಾಸ್ತರ್ ಕೋಣೆಗೆ ಬಂದು, 'ಮಕ್ಕಳಿಗೆಲ್ಲ ಎರಡೆರಡು ಲಾಡು ಕೊಟ್ಟು ಕಳಿಸಿ. ನೀವೂ ತೆಗೆದುಕೊಳ್ಳಿ' ಎಂದು ಹೇಳಿ ಹೊರಟರು.

ಪ್ರತಿಕ್ರಿಯಿಸಿ: **feedback@sudha.co.in**